ಅನುಬಂಧ

1996-97ನೇ ಸಾಲಿನ ಹಂಗಾಮಿನಲ್ಲಿ ಹಾವೇರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ತಾಲ್ಲೂಕುವಾರು ಬೆಳೆದ ಕಬ್ಬಿನ ಕ್ಷೇತ್ರ.

	ತಾಲ್ಲೂಕು	ಕಬ್ಬಿನ ಕ್ಷೇತ್ರ ಏಕ್ರೆ	ಕಬ್ಬಿನ ಉತ್ಪಾದನೆ ಮೆ. ಟನ್
1.	ಹಾವೇರಿ	2242	49,000
2.	ಹಾನಗಲ್	5765	1, 17,888
3.	ಹಿರೇಕೆರೂರು	864	18,500
4.	ಬ್ಯಾಡಗಿ	755	13,600
5.	ಶಿಗ್ಗಾಂವ್	995	17,500
6.	ಸವಣೂರು	86	1,500
7.	ಶಿರಹಟ್ಟಿ	82	1,350
8.	ಕುಂದಗೋಳ	35	600
9.	ಹುಬ್ಬಳ್ಳಿ	306	6, 100
10.	ಧಾರವಾಡ	1149	21,300
11.	ಕಲಘಟಗಿ	744	11, 100
12.	ಮುಂದಗೋಡ್	111	1,780
13.	ಹಳಿಯಾಳ	221	4,000
14.	ಸಿರ್ಸಿ	45	770
15.	ರೋಣ	130	2, 100

ವಿಷಯ:- ಮಾಗಡಿ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನ, ಸಮುದಾಯ ಭವನ ನಿರ್ಮಾಣ ಕುರಿತು.

38(314)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಾಗಡಿ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನ ಹಾಗೂ ಸಮುದಾಯ ಭವನ ನಿರ್ಮಿಸುವ ಪ್ರಸ್ತಾಪ ಸರ್ಕಾರದವರ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ ಯವಾಗ ನಿರ್ಮಿಸಲಾಗುವುದು;

ಇ) ಮಾಗಡಿ ತಾಲ್ಲೂಕಿನ ಪ.ಜಾತಿ:ಪ.ಜನಾಂಗದ ಅಭಿವೃದ್ಧಿಗೆ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಾವುವು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಸರ್ಕಾರದ ಆದೇಶ ಸಂಖ್ಯೆ ಸಕಇ 51 ಪಕವಿ 94 ದಿನಾಂಕ 26-9-94ರಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ ಪ್ರತಿ ಭವನಕ್ಕೆ ರೂ. 3.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 224 ಮಿನಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಲು ಆದೇಶಿಸಿದ್ದು, ದಿನಾಂಕ 29- 12-95ರ ಆದೇಶದಲ್ಲಿ 120 ಸ್ಥಳಗಳಲ್ಲಿ ಮಿನಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಇನ್ನುಳಿದ 104 ಕ್ಷೇತ್ರಗಳಲ್ಲಿ ಮಿನಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಲು ಮಂಜೂರಾತಿ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅದರಲ್ಲಿ ಮಾಗಡಿ ವಿಧಾನ ಸಭಾ ಕ್ಷೇತ್ರವೂ ಸೇರಿರುತ್ತದೆ.

ಆ) ಅಂಬೇಡ್ಕರ್ ಭವನಗಳನ್ನು ಮಂಜೂರು ಮಾಡುವ ಸ್ಥಳಗಳ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡನಂತರ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) ಸಮಾಜ ಕಲ್ಯಾಣ ಇಲಾಖಾವತಿಯಿಂದ ಪ್ರಮುಖವಾಗಿ ಈ ಕೆಳಕಂಡ ಯೋಜನೆಗಳನ್ನು ಮಾಗಡಿ ತಾಲ್ಲೂಕಿನ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗುತ್ತಿದೆ.

1. ಪ.ಜಾ : ಪ.ಪಂಗಡದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು, ವಸತಿ ಶಾಲೆಗಳನ್ನು ನಡೆಸುವುದು.
2. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳನ್ನು ನಡೆಸುವುದು.
3. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.
4. ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಣ್ಣ ತರಬೇತಿ ಕಾರ್ಯಕ್ರಮಗಳು ಅಂದರೆ ಬೆರಳಚ್ಚು, ಶೀಘ್ರಲಿಪಿ, ಲಘುವಾಹನ ಮುಂತಾದವುಗಳಲ್ಲಿ ತರಬೇತಿ ನೀಡುವುದು.
5. ಅಂತರ್ಜಾತಿ ವಿವಾಹವಾದವರಿಗೆ ಪ್ರೋತ್ಸಾಹಧನ ನೀಡುವುದು.
6. ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರಿಗೆ ಪರಿಹಾರ ನೀಡುವುದು.
7. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಲ್ಲಿ ಆರ್ಥಿಕ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳು : ವಸತಿ ಯೋಜನೆ ಇದಲ್ಲದೆ ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಅಂದರೆ ಗಂಗಾಕಲ್ಯಾಣ ಯೋಜನೆ, ವೈಯಕ್ತಿಕ ಕೊಳವೆ ಬಾವಿ ನೀರಾವರಿ ಯೋಜನೆ ಸ್ವಯಂ ಉದ್ಯೋಗ ಯೋಜನೆ ಮುಂತಾದವು ಯೋಜನೆ-ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

Subject:- Schemes for the development of Backward Classes and Minorities.

40(312)

Sri H.G. Balakrishna (Magadi):- Will the Hon'ble Minister for Backward Classes and Minorities be please to state:-

a) Which are the Schemes taken up by the Govt. for the development of various Backward Classes & Minorties.

SRI MALIKAYYA V. GUTTEDAR (Minister for Backward Classes and Minorities):-

a) The Schemes being implemented by the Department of Backward Classes and Minorties are as follows:-

Details of Schemes:

1. Women Welfare Centres (DT)
2. Maintenance of Backward Classes Tailoring Training Centres and Starting of New Tailoring Training Centres.
3. Denotified Hostels (DT) including private Hostels.
4. Ashrama Schools to Nomadic and Semi-Nomadic Tribes.
5. Pre-matric Scholarships (DT)
6. Post-matric Scholarships (DT)
7. EGL Charges to Post-matric Backward Classes Students.
8. Grant-in-aid to Construction of Private Hostel Buildings.
9. Fee Concession.
10. Post-matric Boys/Girls Hostels.
11. Pre-matric Boys/Girls Hostels.
12. Post-matric Scholarships.
13. Pre-matric Scholarships.
14. Stipend to Typewriting and Stenography
15. Grant-in-aid to Private Orphanages.
16. Grant-in-aid to Private Hostels

17. Incentive Award to Hosteliers.
18. Construction of Hostel Buildings and Special Repaints.
19. Pre-matric Boys/Girls New Hostels.
20. Enhancement of Strength in Pre-matric Hostels and maintenance.
21. Enhancement of Strength in Post-matric Hostels.
22. Tailoring Training Centres to Denotified Tribes Womens.
23. Stipend to ITI/Diploma Students (Minorties)
24. Ashrama Schools to Denotified tribes.
25. Grant-in-aid to Hostels run by the Minorities Institutions.
26. Grant-in-aid to Construction of the Hostels buildings by the Minorities Institutions.
27. Residential Schools to Rural Maritorious and Backward Classes students.
28. Comprehensive Development of the people belonging to Category-I ""Bella Belaku"
29. Training to Law Graduates.

Schemes of Corporations:

KARNATAKA BACKWARD CLASSES DEVELOPMENT CORPORATION:

1. Chaitanya Loan Scheme.
2. Self Employment Training.
3. Foremanship Training to Diploma students.
4. Training Schemes to Professional Courses
5. Community Irrigation Schemes (for BCs)

KARNATAKA MINORITIES DEVELOPMENT CORPORATION:

1. Swavalambana Loan Scheme.
2. Motor Driving Training
3. Job Oriental Courses.
4. Community Irrigation Schemes.

ವಿಷಯ:- ರಾಜ್ಯದಲ್ಲಿ ನಡೆಯುತ್ತಿರುವ ಗಣಿ ಉದ್ದಿಮೆಗಳು.

42(128)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ಗಣಿ ಉದ್ದಿಮೆ ನಡೆಯುತ್ತಲಿದೆ; ಯಾವ ಬಣ್ಣದ ಮತ್ತು ಯಾವ ಶ್ರೇಣಿಯ ಕಲ್ಲುಗಳು ಈ ಸ್ಥಳಗಳಲ್ಲಿ ದೊರಕುತ್ತಲಿವೆ; ಗಣಿ ಕೈಗಾರಿಕೆಯಿಂದ ರಾಜ್ಯ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ಸಂದಾಯವಾಗಿರುವ ರಾಯಲ್ಟಿ ಹಣದ ಮೊತ್ತವೆಷ್ಟು;

ಆ) ಗಣಿ ಕೈಗಾರಿಕೆ ನಡೆದಿರುವ ಸ್ಥಳದ ಸಮೀಪದ ಹಳ್ಳಿ ಮತ್ತು ಸುತ್ತ ಮುತ್ತಲಿನ ಹಳ್ಳಿಗಳ ಅಭಿವೃದ್ಧಿಗಾಗಿ ಗಣಿ ಕೈಗಾರಿಕಾ ಇಲಾಖೆಯಿಂದ ಯಾವ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಹಾಗಿಲ್ಲದಿದ್ದಲ್ಲಿ ಈ ಹಳ್ಳಿಗಳು ಸೇರ್ಪಡೆಯಾಗಿರುವ ಸ್ಥಳೀಯ ಸಂಸ್ಥೆಗಳಿಗೆ ವಿಶೇಷ ಅನುದಾನ ನೀಡುವ ಅಗತ್ಯ ಕ್ರಮಗಳನ್ನು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಕಲ್ಲು ಗಣಿ ಕೈಗಾರಿಕೆಯಿಂದ ರಾಜ್ಯ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ಸಂದಾಯವಾಗಿರುವ ರಾಯಲ್ಟಿ ಹಣದ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಮೊತ್ತ (ಲಕ್ಷಗಳಲ್ಲಿ)	
1993-94	ರೂ.	800.00
1994-95	ರೂ.	2109.00
1995-96	ರೂ.	2605.83
ಒಟ್ಟು	ರೂ.	5514.83

ಆ) ಇಲ್ಲ. ಸ್ಥಳೀಯ ಸಂಸ್ಥೆಗಳಿಗೆ ವಿಶೇಷ ಅನುದಾನ ನೀಡಲು ಈ ಇಲಾಖೆಯಲ್ಲಿ ಅವಕಾಶವಿರುವುದಿಲ್ಲ.